## ಟಿವಿ ನೋಡು!

‘ಲೇ, ಬಾರಲೇ ಹೊರ್ಗ ಗಂಗೀ, ಟಿವಿ ನೋಡಬಾ’ ಕೂಗಿಕೊಂಡಳು ನಿಂಗಿ.

‘ಅದ್ಯಾಕ ಅಷ್ಟು ಕೂಗ್ತೀಯಲೇ’ ಅಂತ ನಿಂಗಿ ಮನೆಯತ್ತ ಗಂಗಿ ಓಡಿ ಬಂದ್ಲು.

‘ಲೇ, ನನಗಂಡ ಪಂಚಾಯಿತಿ ಮೆಂಬರು ಅಂತ ಮುರಕಾ ಮಾಡ್ತಿದ್ದಿಯಲ್ಲ. ನೋಡು ನನ ಗಂಡನ ಕೈಯಾಗ ಸಿಕ್ಕು ಹೆಂಗ ತದಕಸಿಕೊಳ್ಳಾಕ ಹತ್ಯಾನ’ ಪೋಲೀಸನ ಹೆಂಡತಿ ನಿಂಗಿಗೆ ಖುಷಿ.

ಯವ್ವಾ, ಈ ಕೊರೊನಾ ಯಾವಾಗ ಹೋದೀತೋ ಏನ್ ಕತಿಯೋ ಗುನಗುನಿಸಿಕೊಂಡು ನೆಲಕ್ಕೆ ಕುಸಿದಳು ಗಂಗಿ.

## ಯಾರ್ಗೆ ಹೇಳಲಿ?

ಆಕೆ: ಯವ್ವಾ ಈ ಕೊರೊನಾ ಬಂದು ಭಲೋ ಆತವಾ. ದಿನಾ ಕುಡ್ದು ದುಡ್ಡ ಹಾಳ ಮಾಡಿ, ಮನಿ ಹಾಳ ಮಾಡ್ತಿದ್ದ ನನಗಂಡ ತಣ್ಣಗ ಮನ್ಯಾಗೈತಿ. ಮೋದಿ ಅಜ್ಜಗ ಪುಣ್ಯ ಬರಲಿ.

ಈಕೆ: ಅಯ್ಯೋ, ನಿಂದರ ಬೇಸಿ. ನನ ಗಂಡ ಕುಡಿಯಾಕ ಅಂಗಡಿ ತಗೀವಲ್ರು ಅಂತ ಸೆರೆ ಅಂಗಡಿ ಮುಂದ ಮಕ್ಕಂಡೈತಿ ಎದ್ದು ಮನೀಗೆ ಬರವಲ್ದು. ನಾ ಯಾರ್ಗೆ ಹೇಳಲಿ?

## ಉಪಾಯ!

ಆಕೆ: ಏನೇ, ನಿನ್ ಗಂಡಮಾವ ಇದ್ದಕ್ಕಿದ್ದಾಗೆ ನಾಪತ್ತೆಯಾಗಿದ್ದಾರೆ?

ಈಕೆ: ಓಹ್ ಅದಾ, ಕೊರೊನಾ ಬಂದಾಗಿಂದ ಅಡುಗೆ ಮಾಡ್ ಹಾಕಿ ಸಾಕಾಗೋಯ್ತು. ಅದ್ಕೆ ಉಪಾಯ ಮಾಡಿ ನಾಳೆ ನನ್ ತಮ್ಮ ವಿದೇಶದಿಂದ ಬರ್ತಾನೆ ಅಂದೆ. ಅಷ್ಟಕ್ಕೆ ಅವ್ರು ಹೆದರಿ ಹಳ್ಳಿ ಮನೆಗೆ ಹೋದ್ರು!



## ಸುದ್ದಿನ ಇಲ್ಲ

ಪೊಲೀಸನ ಹೆಂಡತಿ: ನನ ಗಂಡ ಇಡೀ ದಿನ ಮಂದಿ ದೂರ ಸರಿಸಿ ಸರಿಸಿ ಅದಕ ಎಲ್ಲಿ ಕೊರೊನಾ ಬಂದ್ ಗಿಂದೈತೋ ಅಂತ ನಂ ಔಟ್ ಹೌಸಿನ್ಯಾಗ ಮಲಗಸೇನಿ. ನಿನ್ನ ಗಂಡನ ಕತಿ ಏನಲೇ?

ವೈದ್ಯನ ಹೆಂಡತಿ: ಅಯ್ಯೋ ಅದು 24 ತಾಸೂ ಪೇಶಂಟ್ ನೋಡಿ ನೋಡಿ ಎಲ್ಲಿ ಕೊರೊನಾ ಬಂದೈತೋ ಅಂದು ದವಾಖಾನ್ಯಾಗ ಮಲಗಾಕ ಹೇಳೇನಿ.

ರಾಜಕಾರಣಿ ಹೆಂಡತಿ: ನಂದು ದೊಡ್ಡ ಕತಿ. ಹದನೈದು ದಿನದ ಹಿಂದ ಹೋದಾಂವ ಎಲ್ಲಿ ಅದಾನೋ ಏನೋ ನನಗೆ ಸುದ್ದಿನ ಇಲ್ಲ.

## ಅವಕಾಶ ಸಿಕ್ತು!

ಆ ಪೊಲೀಸು: ಕೊರೊನಾ ಬಂದಾಗಿನಿಂದ ನನಗೆ ತುಂಬ ನೆಮ್ಮದಿ ಸಿಕ್ಕಿದೆ ಮಾರಾಯಾ.

ಈ ಪೊಲೀಸು: ಅಯ್ಯೋ, ನನಗೆ ಸಾಕಾಗಿದೆ ಇಂಥ ಬಿಸಿಲಲ್ಲಿ ನಿಂತು. ನಿನಗ್ಹೇಗೆ ನೆಮ್ಮದಿ ಸಿಕ್ಕಿದೆ?

ಆ ಪೊಲೀಸು: ಮನೆಯಲ್ಲಿ ಹೊಡೆಸಿಕೊಂಡು ಸಾಕಾಗಿತ್ತು. ಈಗ ಅದನ್ನು ತೀರಿಸಿಕೊಳ್ಳೋ ಅವಕಾಶ ಸಿಕ್ತು. ಬಿಟ್ಬಿಡ್ತೀನಾ.

## ಗ್ಯಾರಂಟಿ ಇಲ್ಲ!

ಪುಂಡ: ಈ ಸಲನೂ ಚೀನಾದ ಸರಕು ಭಾಳ ದಿನ ಬಾಳಲ್ಲ ಅನ್ನೋದು ಪ್ರೂವ್ ಆಯ್ತು ನೋಡು.

ಗುಂಡ: ಅದ್ಹೇಗೆ ಹೇಳ್ತೀಯಾ?

ಪುಂಡ: ಈಗಲೂ ಚೀನಾ ಕೊರೊನಾದ ಆಯುಸ್ಸು ಬಹಳ ಅಂದ್ರೆ 20 ದಿನ ಅಲ್ವಾ?

ಗುಂಡ: ಅದೂ ಖರೇನ ಬಿಡು. ಹೊರಗಿದ್ರೆ ಎರಡು ದಿನ, ಒಳಗಿದ್ರೆ 20 ದಿನ!

(ಸಂಗ್ರಹ) ಪ್ರಕಾಶ. ಎಸ್. ಮನ್ನಂಗಿ, ಮೋಟೆಬೆನ್ನೂರು

## ಗಾಜು ಒರೆಸುತ್ತಿದ್ದಾಳೆ!

ಗುಂಡನ ಮನೆಯ ಎದುರಿಗಿದ್ದ ಅಪಾರ್ಟ್‌ಮೆಂಟ್‌ನ ಯುವತಿ ಐದು ನಿಮಿಷ ಕೈ ಅಲುಗಾಡಿಸಿದಳು. ಅದಕ್ಕೆ ಪ್ರತಿಯಾಗಿ ಗುಂಡನೂ ಕೈ ಆಡಿಸಿದ. ಅಷ್ಟರಲ್ಲಿ ಹಿಂದಿನಿಂದ ಬಂದ ಹೆಂಡತಿ ಬೆನ್ನಿಗೆ ತಟ್ಟಿ, ‘ಅವಳು ನಿನಗೆ ಹಾಯ್ ಮಾಡುತ್ತಿಲ್ಲ. ಕಿಟಕಿಯ ಗಾಜು ಒರೆಸುತ್ತಿದ್ದಾಳೆ’ ಎಂದಳು!

## ಆಟೊ ತಂದೆ

ಗುಂಡ: ತಲೆಗೆ ಅಷ್ಟೊಂದು ಗಾಯ ಹೇಗಾಯ್ತು?

ಗೌಡ: ಹೆಂಡತಿ ಹೊಡೆದಳು.

ಗುಂಡ: ಯಾಕೆ?.

ಗೌಡ: ಅವಳು ಅಪ್ಪ ಅಮ್ಮ ಬಂದಿದ್ದರು. ಹೊರಗೆ ಹೋಗಿ ಏನಾದ್ರೂ ತನ್ನಿ ಎಂದಳು. ನಾನು ಹೋಗಿ ಆಟೊ ತಂದೆ ಅಷ್ಟೇ.

(ಸಂಗ್ರಹ) ಶಿವಮೊಗ್ಗ ರಮೇಶ್,ಮೈಸೂರು

